# ಕರ್ನಾಟಕ ವಿಧಾನ ಪರಿಷತ್ತು.

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: | 1035 (1210) |
| ಮಾನ್ಯ ಸದಸ್ಯರ ಹೆಸರು: | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿರಾದವರು) |
| ಉತ್ತರಿಸಬೇಕಾದ ದಿನಾಂಕ: | 19.12.2024. |
| ಉತ್ತರಿಸುವ ಸಚಿವರು: | ಸನ್ಮಾನ್ಯ ಮುಖ್ಯಮಂತ್ರಿಗಳು. |

| ಕ್ರ. ಸಂ. | ಪ್ರಶ್ನೆ. | ಉತ್ತರ. |
|---|---|---|
| ಅ) | ಕಾನೂನು ಬದ್ಧವಾದ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಸೃಜನೆಯಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟಿಗಟ್ಟಲೇ ಅಕ್ರಮ ಹಣ ವರ್ಗಾವಣೆಯ ಬಹುದೊಡ್ಡ ಹಗರಣ ಸರ್ಕಾರದ ಗಮನಕ್ಕಿದೆಯೇ; ಇದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಉಳಿತಾಯ ಖಾತೆಯಲ್ಲಿ ಲಭ್ಯವಿದ್ದ ಮೊತ್ತದಲ್ಲಿ ರೂ.89.63 ಕೋಟಿ ಹಣವನ್ನು ನಕಲು ಸಹಿ ಬಳಸಿ ವಿವಿಧ 18 ಅನಾಮಧೇಯ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿರುವುದರಿಂದ (ರೂ.5.00 ಕೋಟಿಗಳನ್ನು ನಿಗಮದ ಬ್ಯಾಂಕ್ ಖಾತೆಗೆ ಹಿಂದಿರುಗಿಸಲಾಗಿರುತ್ತದೆ), ಈ ಬಗ್ಗೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ನಿಗಮದ ಪ್ರಧಾನ ವ್ಯವಸ್ಥಾಪಕರು ದಿನಾಂಕ:28.05.2024ರಂದು ಹೈಗ್ರೌಂಡ್ಸ್ ಪೋಲಿಸ್ ಠಾಣೆಯಲ್ಲಿ ಮೊ.ಸಂ.118/2024 ಅನ್ನು ದಾಖಲಿಸಿರುತ್ತಾರೆ.<br>ಕರ್ನಾಟಕ ಸರ್ಕಾರದ ಒಳಾಡಳಿತ |

<table>
<tr><td></td><td></td><td>ಇಲಾಖೆ(ಅಪರಾಧಗಳು, ಸೆರೆಮನೆ ಮತ್ತು ಸಿನಿಮಾ)ಯ ದಿನಾಂಕ:31.05.2024ರ ಆದೇಶದಲ್ಲಿ ಶಿವಮೊಗ್ಗ ಜಿಲ್ಲೆ ವಿನೋಬನಗರ ಪೋಲಿಸ್ ಠಾಣೆ ಅಪರಾಧ ಸಂಖ್ಯೆ:83/2024 ಕಲಂ 360 ರ/ವಿ 34 ಐಪಿಸಿ ಹಾಗೂ ಬೆಂಗಳೂರು ನಗರದ ಹೈಗ್ರೌಂಡ್ಸ್ ಪೋಲಿಸ್ ಠಾಣೆ ಅಪರಾಧ ಸಂಖ್ಯೆ:118/2024 ಐಪಿಸಿ ಕಲಂ 149, 409, 420,467 ಮತ್ತು 471ರಡಿ ದಾಖಲಾಗಿರುವ ಪ್ರಕರಣಗಳ ಸಮಗ್ರ ತನಿಖೆಯನ್ನು ಕೈಗೊಳ್ಳಲು ತಾಂತ್ರಿಕ ಪರಿಣತಿ ಇರುವ ರಾಜ್ಯ ವಿಶೇಷ ತನಿಖಾ ಸಂಸ್ಥೆಯಾದ ಸಿಐಡಿಯ ಒಂದು ವಿಶೇಷ ತನಿಖಾ ತಂಡ(Special Investigation Team) ವನ್ನು ರಚಿಸಿ ಆದೇಶಿಸಿದೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ 14 ವ್ಯಕ್ತಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಮುಂದುವರಿದು ದಿನಾಂಕ:05.09.2024ರಂದು ನ್ಯಾಯಾಲಯಕ್ಕೆ SIT ತಂಡವು ಅರೋಪಪಟ್ಟಿಯನ್ನು ಸಲ್ಲಿಸಿದೆ. ತನಿಖೆಯು ಪ್ರಗತಿಯಲ್ಲಿರುತ್ತದೆ.</td></tr>
<tr><td>ಆ)</td><td>ಸದರಿ ನಿಗಮದಲ್ಲಿ ಎಷ್ಟು ಮೊತ್ತದ ಅಕ್ರಮ ಹಣ ವರ್ಗಾವಣೆ ಆಗಿದೆ; ಯಾರಿಗೆ ಯಾವ ಖಾತೆಗೆ, ಯಾವ ದಿನಾಂಕದಂದು ಎಷ್ಟು ಮೊತ್ತ ವರ್ಗಾವಣೆಯಾಗಿದೆ; ಅಕ್ರಮವಾಗಿ ವರ್ಗಾವಣೆಯಾದ ಹಣವನ್ನು ಮರಳಿ ಪಡೆಯಲಾಗಿದೆಯೇ; ಎಷ್ಟು ಮೊತ್ತವನ್ನು ಪಡೆಯಲಾಗಿದೆ, ಬಾಕಿ</td><td>ನಿಗಮದ ಬ್ಯಾಂಕ್ ಖಾತೆಯಿಂದ ವರ್ಗಾವಣೆಯಾಗಿರುವ ಮೊತ್ತದ ವಿವರ.
<table>
<tr><th>Account Type and Number</th><th>Suspected illegal transfers</th><th>Total Amount</th></tr>
<tr><td>SB A/c No. 520141001659653</td><td>9</td><td>45,02,98,000/-</td></tr>
<tr><td>OD A/c No. 034124010000007</td><td>9</td><td>44,60,01,500/-</td></tr>
<tr><td></td><td>Total</td><td>89,62,99,500/-</td></tr>
</table></td></tr>
</table>

| | | |
|---|---|---|
| | ಉಳಿದಿರುವ ಮೊತ್ತವೆಷ್ಟು, ಬಾಕಿ ಮೊತ್ತವನ್ನು ವಸೂಲಿ ಮಾಡಲು ತೆಗೆದು ಕೊಂಡ ಕ್ರಮಗಳೇನು; ಸರ್ಕಾರವು ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ನಿಗಮಕ್ಕೆ ಪಾವತಿ ಮಾಡಿದೆ; ಹಾಗೂ ಉದ್ದೇಶ ಈಡೇರಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | • ಸದರಿ ಹಣ ವರ್ಗಾವಣೆ ಪ್ರಕರಣವು ಮಾರ್ಚ್ 2024 ರಿಂದ ಮೇ 2024ರ ಅವಧಿಯಲ್ಲಿ ನಡೆದಿರುತ್ತದೆ.<br>• ಈ ಪೈಕಿ ರೂ.5.00 ಕೋಟಿಗಳನ್ನು ದಿನಾಂಕ:23.05.2024ರಂದು ಬ್ಯಾಂಕ್ ಖಾತೆಗೆ ಹಿಂದಿರುಗಿಸಲಾಗಿದೆ. ಒಟ್ಟಾರೆ ವರ್ಗವಣೆಯಾಗಿರುವ ಮೊತ್ತ ರೂ.84,62,99,500/- ಗಳಾಗಿರುತ್ತದೆ. ಮುಂದುವರಿದು ಈ ಅನುದಾನ ಸರ್ಕಾರ ನಿಗಮಕ್ಕೆ ಪರಿಶಿಷ್ಟ ಪಂಗಡದವರ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಿದ ಅನುದಾನವಾಗಿರುತ್ತದೆ.<br>• ತನಿಖಾಧಿಕಾರಿಗಳು ಜಪ್ತಿ ಮಾಡಿದ ಹಣ ಹಾಗೂ ಇತರೆಗಳ ವಸ್ತು ಮೌಲ್ಯದ ಮೊತ್ತ ರೂ.79,56,43,707/- ಗಳಾಗಿರುತ್ತದೆ. |
| ಇ) | ಪರಿಶಿಷ್ಟ ಪಂಗಡದ ಜನರಿಗೆ ಅವಶ್ಯ ಅನುಕೂಲತೆಗಳನ್ನು ಕಲ್ಪಿಸಲು ನಿಗಮಕ್ಕೆ ಮೀಸಲಿಟ್ಟ ಹಣವು ವಿವಿಧ ಅಧಿಕಾರಿ ಹಾಗೂ ಮೇಲಾಧಿಕಾರಿಗಳ ವ್ಯಕ್ತಿಗಳ ಹೆಸರಿಗೆ ನೇರವಾಗಿ ಕೋಟಿಗಟ್ಟಲೇ ಹಣ ವರ್ಗಾವಣೆ ಆಗಿರುವುದು ಕಂಡು ಬಂದಿದ್ದು, ಯಾವೆಲ್ಲ ಕಾಣದ ಕೈಗಳು ಇವುಗಳ ಹಿಂದೆ ಇವೆ; ಅಗತ್ಯ ತನಿಖೆಯನ್ನು ನಡೆಸಿ ತಪ್ಪಿತಸ್ತರ | 1. ರಾಜ್ಯ ವಿಶೇಷ ತನಿಖಾ ಸಂಸ್ಥೆಯಾದ ಸಿಐಡಿಯ ಒಂದು ವಿಶೇಷ ತನಿಖಾ ತಂಡ(Special Investigation Team)ದಿಂದ ತನಿಖೆ ನಡೆಯುತ್ತಿದೆ.<br>2. ದಿ:30.05.2024 ರಂದು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್‌ಗೆ (CBI) ದೂರನ್ನು ಸಲ್ಲಿಸಿರುತ್ತದೆ. ಸದರಿ ದೂರಿನಂತೆ |

| | | |
|---|---|---|
| | ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಈ ಪ್ರಕರಣದಲ್ಲಿ ಸರ್ಕಾರವು ತೆಗೆದುಕೊಂಡಿರುವ ನಿರ್ಧಾರಗಳೇನು: | ದಿ:03.06.2024 ರಂದು FIR ದಾಖಲಾಗಿರುತ್ತದೆ.<br>3. ಜಾರಿ ನಿರ್ದೇಶನಾಲಯ(ED), ಬೆಂಗಳೂರು ರವರು PMLA ಕಾಯಿದೆಯಡಿ ಪ್ರಕರಣ ದಾಖಲಿಸಿರುತ್ತಾರೆ. ಮುಂದುವರಿದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ.<br>ಮೇಲ್ಕಂಡ ಮೂರು ತನಿಖಾ ಸಂಸ್ಥೆಗಳಿಂದ ತನಿಖೆ ನಡೆಯುತ್ತಿದ್ದು, ತನಿಖೆ ಪ್ರಗತಿಯಲ್ಲಿದೆ. |
| **ಈ)** | ಪ್ರಸ್ತುತ ಈ ಪ್ರಕರಣದ ತನಿಖೆಯು ಯಾವ ಹಂತದಲ್ಲಿದೆ; ಅಕ್ರಮ ಹಣ ವರ್ಗಾವಣೆಯು ಅಧಿಕಾರ ದುರ್ವಿನಿಯೋಗ ಹಾಗೂ ಕಾನೂನು ಬಾಹಿರವಾದ ಕ್ರಮವಾದಂತಾಗುವುದಿಲ್ಲವೆ; ಇದರಲ್ಲಿ ಮೇಲುಸ್ತುವಾರಿ ವಹಿಸುತ್ತಿರುವವರ ವೈಯಕ್ತಿಕ ಅಧ:ಪತನವು ಎದ್ದು ಕಾಣಿಸಿದಂತಾಗುವುದಿಲ್ಲವೇ; ನಿಗಮದ ಹಗರಣದಲ್ಲಿ ಇನ್ನಷ್ಟು ಪ್ರಭಾವಿಗಳ ಕೈವಾಡ ಅಡಗಿರುವ ಸಾಧ್ಯತೆ ಪಾರದರ್ಶಕ ತನಿಖೆಗಾಗಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕೆಂಬ ವಿಷಯದಲ್ಲಿ ಸರ್ಕಾರವು ಯಾವ ನಿರ್ಧಾರವನ್ನು ತೆಗೆದುಕೊಂಡದೆ? | |

**STW/SECA/STP/144/2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ